ಮದುವೆಯ ಶಾಸ್ತ್ರವೋ ಎಂಬಂತೆ ನಡೆಯುತ್ತದೆ. ಮದ್ಯ ಸೇವಿಸಬಾರದು ಎನ್ನುವುದು ಎಲ್ಲರಿಗೂ ತಿಳಿದಿದ್ದರೂ ದುಡ್ಡು ಚೆಲ್ಲಲಾಗುತ್ತದೆ. ಗಂಡಸರು ಅಷ್ಟೆಲ್ಲ ಮನರಂಜನೆಯನ್ನು ಅನುಭವಿಸುವ, ಆರಾಮವಾಗಿ ಕುಡಿದುಕೊಂಡು ಇರುವ ಅವಕಾಶಗಳನ್ನು ಯಾರೂ ಯಾಕೆ ಪ್ರಶ್ನಿಸುವುದಿಲ್ಲ? ಕೇವಲ ರೀಲ್ಸ್ ಮಾಡಿ ಮಹಿಳೆಯರು ನಾಲ್ಕು ಕ್ಷಣ ಖುಷಿಯಾಗಿರುವುದನ್ನು ಕಂಡಾಗ ಯಾಕೆ ಇಷ್ಟೊಂದು ಅಸಹನೆ ಎದುರಾಗುತ್ತದೆ?’

ಹೌದು. ಮಹಿಳೆ ಆರಾಮವಾಗಿರುವುದು, ತುಸು ಮನರಂಜನೆಯನ್ನು ಅನುಭವಿಸುವುದನ್ನು ನಿಷೇಧಿಸುವುದರ ಹಿಂದಿರುವ ಕಾರಣವೇನು ಎಂಬುದರ ಹಿಂದೆ ಹಲವಾರು ವಿಷಯಗಳು ಅಡಗಿರಬಹುದೇನೋ.

ಡಾ. ಎಚ್.ಎಸ್. ಅನುಪಮಾ ಅವರು, ‘ಅವಳ ದುಡಿಮೆ, ಅವಳ ಹಕ್ಕು’ ಎಂಬ ಮಾದರಿಯಲ್ಲಿಯೇ ‘ಅವಳ ವಿರಾಮ, ಅವಳ ಹಕ್ಕು’ ಎನ್ನುವುದನ್ನು ಪ್ರಸ್ತಾಪಿಸುತ್ತಾರೆ. ಆಧುನಿಕತೆ ಮತ್ತು ಆರ್ಥಿಕತೆಯು ಇಂದು ಮಹಿಳೆಗೆ ಕೊಂಚ ಆರಾಮವನ್ನು ನೀಡಿದೆ. ಹಿಂದೆಂದೂ ಆಕೆಗೆ ದೊರೆಯದ ಈ ಆರ್ಥಿಕ ಸ್ವಾತಂತ್ರ್ಯ ಮತ್ತು ತನಗೇನು ಬೇಕು ಎಂಬುದನ್ನು ನಿರ್ಧರಿಸುವ ಸ್ವಾತಂತ್ರ್ಯವು ಈಗ ದೊರೆಯುತ್ತಿರುವುದನ್ನು ಕಂಡು ಪುರುಷ ಸಮಾಜವು ಆತಂಕಗೊಂಡಿರಬಹುದು ಎನ್ನುತ್ತಾರೆ.

‘ಮನೆಯಲ್ಲಿ ಮಹಿಳೆಯರೇ ದುಡಿಯುತ್ತಾರೆ. ಗಂಡನು ಸಂಸಾರ ತೂಗಿಸಲು ಸಾಧ್ಯವಾಗದೇ ಇದ್ದಾಗ ಅಥವಾ ಮನೆಯ ಅವಶ್ಯಕತೆಗಳು ಎದುರಾದಾಗಲೂ ಮಹಿಳೆಯರು ಗಂಡಿಗೆ ಹೆಗಲೆಣೆಯಾಗಿ ದುಡಿಯುತ್ತಾರೆ. ಆಕೆ ಹೀಗೆ ದುಡಿಯುವಾಗ ಪುರುಷ ಒಡನಾಡಿಯಿಂದ ಯಾವುದೇ ತಗಾದೆಗಳು ಬರುವುದಿಲ್ಲ. ರಶ್ಶಾಗಿರುವ ಬಸ್ಸಿನಲ್ಲಿ ಗಾರ್ಮೆಂಟ್ ಫ್ಯಾಕ್ಟರಿಗೆ ತೆರಳಿ ದುಡಿದು ಸಂಬಳ ಹೊತ್ತು ತರುವಾಗಲೂ ಯಾವುದೇ ಆಕ್ಷೇಪಗಳು ಇರುವುದಿಲ್ಲ. ಆದರೆ ಯಾವಾಗ ಆಕೆ ತನ್ನದೇ ಜೀವಕ್ಕೆ ಒಂದಿಷ್ಟು ವಿರಾಮವೋ, ಮನರಂಜನೆಯೋ ಬೇಕು ಎಂದು ನಿರ್ಧರಿಸುತ್ತಾಳೋ, ಗಂಡನ ಹಣಕ್ಕಾಗಿ ಕಾಯದೆ ತಾನೇ ನಿರ್ಧರಿಸಿ ಪ್ರವಾಸವೊಂದನ್ನು ಹಾಕಿಕೊಳ್ಳುತ್ತಾಳೋ ಆಗ ಮನೆಯ ಪುರುಷರ ಎದೆಯಲ್ಲಿ ಅಭದ್ರತೆಯ ಸೆಳಕೊಂದು ಕಾಣಿಸಿಕೊಳ್ಳುತ್ತಿದೆ’ ಎಂದು ಅವರು ಗುರುತಿಸುತ್ತಾರೆ.



ಜಗತ್ತಿನ ಎಲ್ಲ ನಿಯಮಗಳನ್ನು, ಕಟ್ಟುಪಾಡುಗಳನ್ನು ಮಹಿಳೆಯರಿಗೇ ಆರೋಪಿಸುವುದರಿಂದ, ಆಕೆ ಹೊಸ ಹೆಜ್ಜೆಗಳನ್ನು ಇಡುವಾಗಲೆಲ್ಲ ಆಕ್ಷೇಪಗಳು ವ್ಯಕ್ತವಾಗುತ್ತವೆ. ಹಳ್ಳಿ ಮತ್ತು ನಗರಗಳೆನ್ನದೇ ಈ ಆಕ್ಷೇಪಗಳು ಇತ್ತೀಚೆಗೆ ಎಲ್ಲ ಕಡೆ ವ್ಯಕ್ತವಾಗುತ್ತವೆ. ಆಕೆಯ ಮನರಂಜನೆ, ಆಕೆಯ ಪ್ರಯಾಣ, ಅಷ್ಟೇ ಏಕೆ, ಆಕೆ ಒಂದು ನಾಕಾರು ಸೆಕೆಂಡುಗಳ ರೀಲ್ಸ್ ಮಾಡಿದಾಗಲೂ– ಎಲ್ಲವೂ ತಪ್ಪಾಗಿ, ಕೆಲಸಕ್ಕೆ ಬಾರದ ವಿಚಾರಗಳಾಗಿ ಕಾಣಿಸಿಬಿಡುತ್ತದೆ. ಮನೆಯಿಂದ ಹೊರಗೆ ಹೋಗಿ ಜಗತ್ತನ್ನು ನೋಡುವ ಆಯ್ಕೆಗಳು ಆಕೆಗೆ ಸಿಗಲೇಬಾರದು ಎಂಬ ಧೋರಣೆಯಿಂದಾಗಿ ಇಂತಹ ಟೀಕೆಗಳು ವ್ಯಕ್ತವಾಗುತ್ತವೆ. ಆದರೆ ಈ ಸವಾಲುಗಳನ್ನು ದಾಟಿ ಮುನ್ನಡೆಯುವ ಚೈತನ್ಯ ಆಕೆಗೆ ಇದೆ ಎನ್ನುವುದು ಕೂಡ ಸುಳ್ಳಲ್ಲ.

**-ಪ್ರೀತಿ ನಾಗರಾಜ್**

**ಲೇಖಕಿ-ಪತ್ರಕರ್ತೆ, ಮೈಸೂರು**

‘ತಾವು ಹಾಕಿದ ಚೌಕಟ್ಟಿನಲ್ಲಿಯೇ ಇದುವರೆಗೆ ನಡೆಯುತ್ತಿದ್ದ ಮಹಿಳೆಯರು ಹೀಗೆ ಸ್ವತಂತ್ರವಾದ ನಿರ್ಧಾರ ತೆಗೆದುಕೊಳ್ಳುವ ಸಂದರ್ಭದಲ್ಲಿ ಸೃಷ್ಟಿಯಾಗುತ್ತಿರುವ ಈ ಆತಂಕವು ‘ಸೇವೆ’ಗೆ ಸಂಬಂಧಿಸಿದ್ದು. ತಾನು ಕುಟುಂಬದ ಯಜಮಾನ ಎಂದು ಪಟ್ಟವನ್ನು ನಿರ್ಮಿಸಿಕೊಡುತ್ತಿದ್ದ ಪತ್ನಿ ಅಥವಾ ಮನೆಯ ಸದಸ್ಯೆಯರು ಯಾವಾಗ ಆ ಕಾರ್ಯಕ್ಕೆ ಆದ್ಯತೆ ನೀಡದೆ ತಮ್ಮದೇ ಸ್ವಂತ ಆಸೆ ಆಕಾಂಕ್ಷೆಗಳನ್ನು ಬೆಂಬತ್ತಿ ಹೋಗಲು ಆರಂಭಿಸಿದರೋ, ಆಗ ತಮ್ಮ ಸ್ಥಾನಕ್ಕೆ ಚ್ಯುತಿ ಬರುತ್ತಿದೆ ಎಂಬ ಆತಂಕ ಸಹಜವಾಗಿ ವ್ಯಕ್ತವಾಗುತ್ತದೆ. ಅಂತಹ ಆತಂಕಗಳೇ ಮಹಿಳೆಯರ ಬಗ್ಗೆ ಸಲ್ಲದ ಹೇಳಿಕೆಗಳನ್ನು ನೀಡುವಂತೆ ಪ್ರೇರೇಪಿಸುತ್ತಿದೆ. ತನ್ನ ಸೇವೆ ಮಾಡಲೆಂದೇ ಈಕೆಯಿದ್ದಾಳೆ ಎಂದು ಭಾವಿಸಿದ್ದವರ ಹೃದಯದಲ್ಲಿ ಅಭದ್ರತೆ ಮೂಡುತ್ತಿದೆ’ ಎಂದು ವ್ಯಾಖ್ಯಾನಿಸುತ್ತಾರೆ ಡಾ. ಅನುಪಮಾ.

ಅನುಪಮಾ ಅವರ ಅಭಿಪ್ರಾಯವನ್ನು ಪ್ರೊ. ಚಂದ್ರಕಲಾ ಅವರೂ ಅನುಮೋದಿಸುತ್ತಾರೆ.

‘ದುಡಿಮೆ ಎನ್ನುವುದು ಹೆಣ್ಣಿನ ಪಾಲಿಗೆ ಹೊಸತೇನೂ ಅಲ್ಲ. ದೇಶದ ಜನಸಂಖ್ಯೆಯ ಸರಿಸುಮಾರು ಅರ್ಧದಷ್ಟು ಇರುವ ಮಹಿಳೆಯರ ಶ್ರಮವನ್ನು ‘ಆರ್ಥಿಕತೆ’ಯ ರೂಪದಲ್ಲಿ ಪರಿಗಣಿಸುವ ವಾಡಿಕೆ ಇಲ್ಲದಿದ್ದ ಸಂದರ್ಭದಲ್ಲಿ, ಹಣಕಾಸಿನ ಮಹಿಮೆಯನ್ನೇ ಕೊಂಡಾಡುವುದು ವಾಡಿಕೆಯಾಗಿತ್ತು. ಇಂದು ಅದೇ ಹಣಕಾಸಿನ ಒಡೆತನವು ಮಹಿಳೆಗೆ ಸಲ್ಲುತ್ತಿರುವ ಪರಿಣಾಮವಾಗಿ, ಹೆಚ್ಚಿನ ತಡೆಗೋಡೆಗಳನ್ನು ನಿರ್ಮಿಸುವುದು ಸಾಧ್ಯವಾಗುತ್ತಿಲ್ಲವಷ್ಟೇ’ ಎನ್ನುತ್ತಾರೆ.

ಹಾಗಿದ್ದರೆ ಸಂಬಂಧಗಳು ಮತ್ತು ಕೌಟುಂಬಿಕ ವ್ಯವಸ್ಥೆ ಎನ್ನುವುದು ಬರೀ ಪರಸ್ಪರ ಅವಲಂಬನೆಯ ಮಾತೇ ಎಂಬ ಪ್ರಶ್ನೆಗೆ ಉತ್ತರಿಸುವ ಪತ್ರಕರ್ತೆ ಪ್ರೀತಿ ನಾಗರಾಜ್, ‘ಕೌಟುಂಬಿಕ ವ್ಯವಸ್ಥೆಯು ಖಂಡಿತಾ ಬರೀ ಹಣಕಾಸಿನ ಅಥವಾ ಅಗತ್ಯಗಳ ಅವಲಂಬನೆಯ ಆಧಾರದಲ್ಲಿ ರೂಪುಗೊಂಡಿಲ್ಲ. ಈ ವ್ಯವಸ್ಥೆಯು ಪರಸ್ಪರರ ಏಳ್ಗೆಯನ್ನು ಬಯಸುವ, ಸಾಂಗತ್ಯಕ್ಕೆ ಆಸರೆ ನೀಡುವ ಒಂದು ಸುಂದರವಾದ ವ್ಯವಸ್ಥೆ. ಆದರೆ ಯಾರಿಗೆ ಕೌಟುಂಬಿಕ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲದೇ ಇದ್ದಾಗ, ಕುಟುಂಬದ ಸದಸ್ಯರು ತನ್ನನ್ನು ಅವಲಂಬಿಸಿ ಇದ್ದಾಗಲಷ್ಟೇ ಅದು ಭದ್ರವಾಗಿರುತ್ತದೆ ಎಂದು ಕೀಳಂದಾಜು ಮಾಡುವ ವ್ಯಕ್ತಿಗಳಿದ್ದಾಗ ಸಹಜವಾಗಿಯೇ

